ಆರ್ಥಿಕವಾಗಿ ಮೇಲೆ ಬರುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ ಸರ್ಕಾರ ಈ ಬಗ್ಗೆ ಕ್ರಮ ಕೈಗೊಳ್ಳುವುದೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರ ಕಳಕಳಿಯನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಪರ್ಸಿನ್ ಬೋಟ್ಸ್ ಮತ್ತು ಟ್ರೋಲರ್ಸ್‌ಗಳು ಸಾಷ್ಟು ಸಂಖ್ಯೆಯಲ್ಲಿರುವುದರಿಂದ ಮತ್ತೆ ಹೆಚ್ಚಿನ ಸಂಖ್ಯೆಯಲ್ಲಿ ಪರ್ಸಿನ್ ಬೋಟ್ಸ್ ಮತ್ತು ಟ್ರೋಲರ್ಸ್‌ಗಳನ್ನು ಇಟ್ಟುಕೊಂಡರೆ ಅನಾನುಕೂಲವಾಗಿ ಅವರ ಆರ್ಥಿಕ ಪರಿಸ್ಥಿತಿ ಕುಗ್ಗಬಹುದು ಎನ್ನುವ ದೃಷ್ಟಿಯಿಂದ ಅದನ್ನು ಸರ್ಕಾರ ಪರಿಶೀಲನೆಗೆ ತಗೆದು ಕೊಂಡಿಲ್ಲ. ಮಾನ್ಯ ಸದಸ್ಯರು ಈಗ ಏನು ಸೂಚನೆ ಕೊಟ್ಟಿದ್ದಾರೆ ಆ ಬಗ್ಗೆ ನಾವು ತಜ್ಞರ ಅಭಿಪ್ರಾಯವನ್ನು ಪಡೆದು ಅವಶ್ಯಕವಿದ್ದರೆ ಪರ್ಸಿನ್ ಬೋಟ್ಸ್ ಮತ್ತ ಟ್ರೋಲರ್‌ಗಳನ್ನು ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಪ್ರಶ್ನೋತ್ತರಗಳು

ಶಿರೂರು ಮೀನುಗಾರಿಕಾ ಬಂದರಿನ ಅಭಿವೃದ್ಧಿ

೫೫. ಶ್ರೀ ಜಿ. ಎಸ್. ಆಚಾರ್, (ಗೋಪಾಲಕೃಷ್ಣ ಬೈಂದೂರು).—ಮಾನ್ಯ ಬಂದರು ಹಾಗೂ ಮೀನುಗಾರಿಕೆ, ವಸತಿ ಹಾಗೂ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ದಕ್ಷಿಣ ಕನ್ನಡ ಜಿಲ್ಲೆಯ ಶಿರೂರು ಮೀನುಗಾರಿಕಾ ಬಂದರು ಅಭಿವೃದ್ಧಿಗಾಗಿ ಅನೇಕ ಲಕ್ಷ ಹಣ ವೆಚ್ಚವಾಗಿರುವುದು ಸರ್ಕಾರದಪಕ ಗಮನಕ್ಕೆ ಬಂದಿದೆಯೇ ?

ಆ) ಇದರಿಂದ ಅನೇಕ ಕಾರ್ಮಿಕರಿಗೆ ಉಪಯೋಗವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ.

ಇ) ಬ್ರೇಕ್ ವಾಟರ್ ಬೆಳೆಸುವ ಯಾರ್ಡ್‌ನ್ನುಬಗ್ಗೆ ಸರ್ಕಾರವು ಯಾವ ಯೋಜನೆ ಹಾಕಿಕೊಂಡಿದೆ.

ಈ) ಈ ಯೋಜನೆ ಕೆಲಸ ಪೂರ್ತಿ ಯಾವಾಗ ಆಗುವುದು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಮೀನುಗಾರಿಕೆ, ಬಂದರು, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಬ್ರೇಕ್ ವಾಟರ್‌ನ್ನು ನಿರ್ಮಾಣ ಮಾಡಲು ಸದ್ಯಕ್ಕೆ ಯಾವ ಯೋಜನೆಗಳು ಇರುವುದಿಲ್ಲ. ೧೯೯೦-೯೧ನೇ ಸಾಲಿನಲ್ಲಿ ಕಡಲ ತೀರದ ಹಳ್ಳಿಗಳಿಗೆ ರಚನಾತ್ಮಕ ಸೌಲಭ್ಯಗಳ ಯೋಜನೆಯಡಿಯಲ್ಲಿ ಮೀನು ಬೆಳೆಸುವ ಯಾರ್ಡ್‌ಗಳನ್ನು ನಿರ್ಮಿಸುವ ಯೋಜನೆ ಇದೆ.

ಈ) ೧೯೯೧ನೇ ಮಾರ್ಚ್ ಒಳಗಾಗಿ ಬೆಳೆಸುವ ಯಾರ್ಡ್‌ನ ಕೆಲಸವನ್ನು ಪೂರ್ತಿಗೊಳಿಸಲಾಗುವುದು.

ಶ್ರೀ ಜಿ. ಎಸ್. ಆಚಾರ್.—ಮಾನ್ಯ ಅಧ್ಯಕ್ಷರೇ, ನಾನು ಕೇಳುಹಿಸಿದ ಪ್ರಶ್ನೆ ಬದಲಾಗಿದೆ ಎಂದು ನನಗನಿಸತ್ತದೆ. ನಾನು ಕೇಳುಹಿಸಿದ್ದು ದಕ್ಷಿಣ ಕನ್ನಡ ಜಿಲ್ಲೆಯ ಗ್ರಾಮಾಭಿವೃದ್ಧಿ ಬಗ್ಗೆ ಆದರೆ ಇಲ್ಲಿ ಬಂದಿರುವುದು ಬಂದರು ಅಭಿವೃದ್ಧಿ ಬಗ್ಗೆ ಅದಕ್ಕಾಗಿ ಈ ಪ್ರಶ್ನೆ ಉದ್ಭವವಾಗುವುದಿಲ್ಲವೆಂದು ನನಗೆ ಉತ್ತರ ಬಂದಿದೆ.

ಶ್ರೀ ವಾಟಾಳ್ ನಾಗರಾಜ್.—ನಿಮ್ಮ ಪ್ರಶ್ನೆ ಸಮುದ್ರಕ್ಕೆ ಹೋಯಿತು.

ಸನ್ಮಾನ್ಯ ಅಧ್ಯಕ್ಷರೇ, ಕೇಂದ್ರ ಸರ್ಕಾರದ ಮತಿಯಿಂದ ಅನೇಕ ಯೋಜನೆಗಳು ನಮ್ಮ ಕುಂದಾಪುರ ತಾಲ್ಲೂಕು ಶಿರೂರು ಗ್ರಾಮಕ್ಕೆ ಬೇರೆ ಬೇನೆ ಉದ್ದೇಶಕ್ಕಾಗಿ ಮಂಜೂರಾಗಿದೆ. ಆದರಲ್ಲಿ ವಾಟರ್ ಸಪ್ಲೈ ರೋಡ್ ಫಾರ್ಮೇಷನ್, ಬಂದರು ಅಭಿವೃದ್ಧಿ, ಬ್ಯಾಕ್ ವಾಟರ್ ನಿರ್ಮಾಣ, ಹಾಗೆಯೇ ಒಣಗಿಸುವಂಥ ಯಾರ್ಡ್‌ಗಳ ರಚನೆ. ಆದರೆ ಇದರಲ್ಲಿ ಯಾವುವೂ ಕಾರ್ಯಗತ ಆಗಿಲ್ಲ. ವಾಟರ್ ಸಪ್ಲೈ ಕೆಲಸ ಕೈಗತ ಗೊಂಡಿದೆ. ರಸ್ತೆ ಕೆಲಸ ಪೂರ್ಣವಾಗಿಲ್ಲ. ಐಸ್ ಪ್ಲಾಂಟ್ ನಿರ್ಮಾಣ ಆಗಿದ್ದಾಗಿದೆ. ಆದರೆ ಅದು

ನಿಷ್ಕ್ರಿಯವಾಗಿದೆ, ಅಲ್ಲಿ ಕೆಲಸ ನಡೆಯುತ್ತಿಲ್ಲ. ಹಾರ್ಬರ್ ಅಭಿವೃದ್ಧಿ ಬಗ್ಗೆ ಕಲ್ಲುಗಳನ್ನು ಹೊಡೆದು ಅನೇಕ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದರೂ ಇನ್ನೂ ಕೆಲಸ ಆಗಿಲ್ಲ. ಹಾಗೆಯೇ ಮೀನು ಒಣಗಿಸುವ ಯಾರ್ಡ್‌ನ್ನು ೧೯೯೧ನೇ ಇಸವಿಯಲ್ಲಿ ಮುಗಿಸಬೇಕೆಂಬ ಯೋಜನೆ ಇದ್ದರೂ ಆ ಯೋಜನೆ ಪ್ರಾರಂಭವಾಗಿ ಅರ್ಧಕ್ಕೆ ಹಾಗೆಯೇ ನಿಂತಿದೆ. ಕೆಲವು ತಿಂಗಳುಗಳ ಹಿಂದೆ ಸನ್ಮಾನ್ಯ ಮೀನುಗಾರಿಕೆ ಇಲಾಖೆಯ ಮಾನ್ಯ ಸಚಿವರು ನಮ್ಮ ತಾಲ್ಲೂಕಿಗೆ ಬಂದಿದ್ದಾಗ, ಪಾಪ ಅವರಿಗೆ ಇನ್ನೂ ಊಟ ಕೂಡ ಮಾಡಿರಲಿಲ್ಲ. ಆದರೂ ನಾನು ಒತ್ತಾಯ ಮಾಡಿ ಈ ಯೋಜನೆಗಳನ್ನು ತೋರಿಸಿದೆ. ಆಗ ಅಲ್ಲಿ ಸಹಸ್ರಾರು ಮೀನುಗಾರರು ಇದ್ದರು. ಆ ಕೆಲಸಗಳನ್ನು ಕೂಡಲೇ ಮಾಡಿಸಿಕೊಡುತ್ತೇನೆಂದು ಮಾನ್ಯ ಮಂತ್ರಿಯವರು ವಾಗ್ದಾನ ಕೊಟ್ಟು ಬಂದಿದ್ದಾರೆ. ಆದರೆ ಇಲ್ಲಿ ಕೊಟ್ಟಿರುವ ಉತ್ತರಕ್ಕೂ ಮತ್ತು ಮಾನ್ಯ ಸಚಿವರು ನೋಡಿದ್ದಕ್ಕೂ ಸಂಪೂರ್ಣ ವಿರೋಧಾಭಾಸ ಇದೆ, ಮಾನ್ಯ ಮಂತ್ರಿಗಳೇ ಇದನ್ನು ಸ್ವತಃ ಕಣ್ಣಿನಿಂದ ನೋಡಿದ್ದರಿಂದ ಯಾವಾಗ ಈ ಕೆಲಸಗಳನ್ನು ಮಾಡಿಸುತ್ತಾರೆಂದು ನಾನು ಕೇಳುತ್ತಿದ್ದೇನೆ.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಅಧ್ಯಕ್ಷರೇ, ಪ್ರಶ್ನೆ ಯಾವ ತರಹ ಇದೆಯೋ ಅದೇ ತರಹ ಉತ್ತರವನ್ನು ಕೊಡಲಾಗಿದೆ. ನನ್ನ ಇಲಾಖೆಯಿಂದ ಯಾವುದೇ ರೀತಿಯಲ್ಲಿ ಆಚಾತುರ್ಯವಾದ ಉತ್ತರವನ್ನು ಕೊಟ್ಟಿಲ್ಲ ಈಗ ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಆ ಬಗ್ಗೆ ಹೇಳಬೇಕೆಂದರೆ, ನಾನು ಈ ಇಲಾಖೆಯನ್ನು ವಹಿಸಿಕೊಂಡಮೇಲೆ ತಕ್ಷಣ ಆ ಜಿಲ್ಲೆಯಲ್ಲಿ ಪ್ರವಾಸ ಮಾಡಿದ್ದೇನೆ ನಾನು ಪ್ರವಾಸ ಮಾಡುವ ಕಾಲದಲ್ಲಿ ಅವರ ಕ್ಷೇತ್ರಕ್ಕೂ ಹೋಗಿ ಬಂದಿದ್ದೇನೆ. ಶಿರೂರಿನಲ್ಲಿ ಯಾವ ಬಂದರೂ ಇಲ್ಲ, ಆದರೆ ಮೀನುಗಾರರ ಅನುಕೂಲಕ್ಕಾಗಿ ಮಾಡಲಾಗಿದ್ದ ಕೆಲವು ಯೋಜನೆಗಳ ಕೆಲಸಗಳು ತೃಪ್ತಿಕರವಾಗಿ ಆಗಿಲ್ಲವೆಂದು ನನ್ನ ಮನಸ್ಸಿಗೆ ಬಂದಿದೆ. ಅಲ್ಲಿ ಕೆಲವು ಯೋಜನೆಗಳನ್ನು ೧೯೯೦-೯೧ರೊಳಗೆ ೨ ಲಕ್ಷದ ೨೦ ಸಾವಿರ ರೂಗಳ ವೆಚ್ಚದಲ್ಲಿ ಮುಗಿಸಬೇಕೆಂದು ತೀರ್ಮಾನವಾಗಿದೆ. ಆದರಲ್ಲಿ ೧೦ ಟನ್ ಮಂಜುಗಡ್ಡೆ ತಯಾರು ಮಾಡುವ ಫ್ಯಾಕ್ಟರಿ. ಸಮಾಜಭವನ, ಸಂಪರ್ಕ ರಸ್ತೆ ಕೆಲಸಗಳು ಮೀನು ಒಣಗಿಸುವ ಯಾರ್ಡ್. ಇವರೆಲ್ಲ ಮೂರು ಕೆಲಸಗಳನ್ನು ಪೂರ್ಣಗೊಳಿಸಿದ್ದೇವೆ. ಮೀನು ಒಣಗಿಸುವ ಯಾರ್ಡ್ ಬಗ್ಗೆ ಭೂಮಿಯನ್ನು ಅಕ್ವೈರ್ ಮಾಡಿಕೊಳ್ಳುವ ಸಂಬಂಧದಲ್ಲಿ ಕಾನೂನಿನ ತೊಡಕಾಗಿದ್ದರಿಂದ ಕೆಲಸ ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ ಈಗ ಜಮೀನನ್ನು ಅಕ್ವಿಸಿಷನ್ ಮಾಡಿಕೊಳ್ಳುವ ಬಗ್ಗೆ ಇದ್ದ ಸ್ಟೇಯನ್ನು ತೆರವು ಮಾಡಿಸಿರುವುದರಿಂದ ಇನ್ನು ಮುಂದೆ ಕೆಲಸ ಮಾಡುವುದಕ್ಕೆ ಸುಲಲಿತವಾಗುತ್ತದೆ. ೧೯೯೦-೯೧ರಲ್ಲಿ ಈ ಕೆಲಸಗಳನ್ನು ಪೂರ್ಣಗೊಳಿಸುವುದಕ್ಕೆ ಹಾಗೂ ಮೀನುಗಾರರಿಗೆ ಅನುಕೂಲ ಒದಗಿಸುವುದಕ್ಕೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ ಎನ್ನುವ ಭರವಸೆಯನ್ನು ತಮ್ಮ ಮುಖಾಂತರ ಕೊಡುತ್ತಿದ್ದೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಗೋಳಿಯಲ್ಲಿ ಆಂಗ್ಲ ಮಾಧ್ಯಮ ಶಾಲೆ

೫೬೭. ಶ್ರೀ ಸೋಮಪ್ಪ ಸುವರ್ಣ (ಮೂಡಬಿದರೆ).—ಮಾನ್ಯ ಶಿಕ್ಷಣ ಯುವಜನ ಸೇವೆ, ವ್ಯವಹಾರಗಳು ಕ್ರೀಡೆಗಳು. ಕನ್ನಡ ಮತ್ತು ಸಂಸ್ಕೃತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದ್ರಿ ತಾಲ್ಲೂಕಿನ ಕಿನ್ನಿಗೋಳಿಯಲ್ಲಿ ಅನಧಿಕೃತವಾಗಿ ಆಂಗ್ಲ ಮಾಧ್ಯಮ ಶಾಲೆ ಕಳೆದ ಮೂರು ವರ್ಷಗಳಿಂದ ನಡೆಸುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಈ ಶಾಲೆಗೆ ಸರ್ಕಾರವು ಮಂಜೂರಾತಿ ಕೊಡಲು ಕ್ರಮಕೈಗೊಳ್ಳುವುದೆ ?

ಇ) ಇಲ್ಲವಿದ್ದಲ್ಲಿ, ಈ ಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಆಗುವ ತೊಂದರೆ ತಪ್ಪಿಸಲು ಸರ್ಕಾರವು ಏನು ಕ್ರಮ ಕೈಗೊಳ್ಳುವುದು ?

ಶ್ರೀ ಕೆ. ಜೆಡ್. ರಂಗನಾಥ್ (ಶಿಕ್ಷಣ ಮಂತ್ರಿಗಳು).—

ಅ) ಹೌದು.

ಆ) ಮಾನ್ಯತೆಯ ಶಾಲೆಗಳಿಗೆ ತಮ್ಮದಾದ ಪಠ್ಯಕ್ರಮ ನಿಯಮಗಳನ್ನು ಪೂರೈಸಿಲ್ಲದ ಕಾರಣ ಶಾಲೆ ನಡೆಸಲು ಅನುಮತಿಯನ್ನು ತಿರಸ್ಕರಿಸಲಾಗಿದೆ.